

'ಒನ್ ಬುಕ್, ಒನ್ ಶಿಕಾಗೋ' ಕಾರ್ಯಕ್ರಮಕ್ಕೆ ಸಹೃದಯರ ಸ್ಪಂದನ

ಪಡೆದಿದ್ದಾರೆ. ಮಕ್ಕಳ ಜೊತೆಗೆ ಪೋಷಕರೂ ಭಾಗವಹಿಸಿ ಲಾಭದ ವಿಸ್ತರಣೆಯನ್ನು ಕಂಡುಕೊಳ್ಳಲು ಕೂಡ ಸಹಾಯ ಮಾಡಿದೆ.

- 'ಸಮುದಾಯ ಸಿನಿಮಾ' ಎನ್ನುವ ಚಟುವಟಿಕೆಯಿಂದ ಗ್ರಂಥಾಲಯಗಳಲ್ಲಿ ಉಚಿತವಾಗಿ ಸಿನಿಮಾವನ್ನು ತೋರಿಸಲಾಗುತ್ತಿದೆ ಎಂದರೆ ಅಚ್ಚರಿಯಾದೀತು. ಶಿಕಾಗೋ ಗ್ರಂಥಾಲಯವು ಸುಮಾರು 15 ಸಾವಿರ ನಾಗರಿಕರಿಗೆ ಸರಿ ಸುಮಾರು 2500 ಶೋಗಳನ್ನು 2024ರಲ್ಲೇ ನಡೆಸಿದೆ. ಸಾಮಾನ್ಯವಾಗಿ ಜನಪ್ರಿಯವೂ, ಉತ್ಕೃಷ್ಟವೂ ಆದ ಚಲನಚಿತ್ರಗಳನ್ನು ಸಾರ್ವಜನಿಕರಿಗೆ ತೋರಿಸಲಾಗುತ್ತದೆ.
- 'ಒಂದು ಪುಸ್ತಕ, ಒಂದು ಶಿಕಾಗೋ' **(One Book, One Chicago)** ಎನ್ನುವ ಕಾರ್ಯಯೋಜನೆಯು ಇಡೀ ನಗರದಾದ್ಯಂತ ಒಂದು ಪುಸ್ತಕವನ್ನು ಓದುವ ಮತ್ತು ಅದರ ಕುರಿತು ಚರ್ಚೆಯನ್ನು ಏರ್ಪಡಿಸಿ, ಓದುಗರಿಗೆ ಭಾಗವಹಿಸಲು ಅನುಕೂಲ ಮಾಡಿಕೊಟ್ಟಿದೆ. ಕಳೆದ 2001ರಿಂದ ನಿರಂತರವಾಗಿ ನಡೆದು ಬಂದಿರುವ ಈ ಕಾರ್ಯಕ್ರಮವನ್ನು 2013ರಿಂದ ಆಯ್ದ ಪುಸ್ತಕದ ಲೇಖಕರೊಡನೆ ಓದುಗರು ಚರ್ಚಿಸಲು ಅನುಕೂಲ ಆಗುವಂತೆಯೂ ನಡೆಸಿಕೊಂಡು ಬರಲಾಗಿದೆ. ಇದರಲ್ಲಿ ಆಯಾ ವರ್ಷದ ಪುಸ್ತಕವನ್ನು ಓದಿಗೆಂದು ಖ್ಯಾತ ಬರಹಗಾರರ ಸಮಿತಿಯು ನಿರ್ಧರಿಸುತ್ತದೆ. ಅದನ್ನು ಗ್ರಂಥಾಲಯವು ಸಾರ್ವಜನಿಕರೊಂದಿಗೆ ಹಂಚಿಕೊಂಡು ಓದಿಗೆ ಆಹ್ವಾನಿಸುತ್ತದೆ. ಎರಡು–ಮೂರು ತಿಂಗಳ ನಂತರ ಚರ್ಚೆಗೆ ಲೇಖಕರನ್ನೂ ಓದುಗರನ್ನು ಒಂದೆಡೆ ಸೇರಿಸುತ್ತದೆ.

2024ರಲ್ಲಿ ಗೆಬ್ರಿಯೆಲ್ ಜೆವಿನ್ **(Gabrielle Zevin)** ಎಂಬ ಲೇಖಕಿಯ 'ಟುಮಾರೊ ಅಂಡ್ ಟುಮಾರೊ ಅಂಡ್ ಟುಮಾರೊ' **(Tomorrow and Tomorrow and Tomorrow)** ಕೃತಿಯ ಓದಿನಲ್ಲಿ ಸುಮಾರು 75 ಸಾವಿರ ನಾಗರಿಕರು ಭಾಗವಹಿಸಿದ್ದರು. ನವೆಂಬರ್ 14ರಂದು ಲೇಖಕಿಯೊಂದಿಗೆ ನಡೆಸಿದ ಸಂವಾದದಲ್ಲಿ ಸಾವಿರಾರು ಜನರು ಭಾಗವಹಿಸಿದ್ದರು.

## ಕಲೆ ಮತ್ತು ಸಂಸ್ಕೃತಿ: ವಿಶ್ವದರ್ಜೆಯ ನಗರ

ಶಿಕಾಗೋ ವಿಶ್ವದರ್ಜೆಯ ಕಲೆ ಮತ್ತು ಸಂಸ್ಕೃತಿಗೆ ನೆಲೆಯಾಗಿದೆ. ಜೊತೆಗೆ ಇದೊಂದು ಅತ್ಯಂತ ಸಾರ್ವಜನಿಕಸ್ನೇಹಿ ನಗರ. 1871ರಲ್ಲಿ ಉಂಟಾದ ಭಾರಿ ಬೆಂಕಿ ಅನಾಹುತದಿಂದ ಹೊರಬಂದು ಇಡೀ ನಗರದಲ್ಲಿ ಅತ್ಯಾಧುನಿಕ ಸಾರ್ವಜನಿಕ ಅನುಕೂಲಗಳನ್ನು ಕಲ್ಪಿಸುತ್ತಾ, ನಾಗರಿಕ ಬದುಕನ್ನು ಅರ್ಥಪೂರ್ಣವಾಗಿ ಕಟ್ಟಿಕೊಡಲಾಗಿದೆ. ಅಮೆರಿಕದ ನೆಲವು ಕಾರುಗಳಿಲ್ಲದೆ ಸುಲಭವಾಗಿ ನಗರದ ಎಲ್ಲಾ ಕಡೆಗಳಲ್ಲೂ ಸಾರ್ವಜನಿಕ ಸಾರಿಗೆಯನ್ನೇ ನಂಬಿ ಅಡ್ಡಾಡಬಹುದೆಂದರೆ ಅದು ಶಿಕಾಗೋದಲ್ಲಿ ಸಾಧ್ಯ. ಇಡೀ ಅಮೆರಿಕದಲ್ಲಿ ನ್ಯೂಯಾರ್ಕ್ ಮತ್ತು ಲಾಸ್ ಏಂಜಲೀಸ್ ಹೊರತುಪಡಿಸಿದರೆ ಹೆಚ್ಚು ಜನಸಂಖ್ಯೆ ಹೊಂದಿರುವ ಮೂರನೇ ನಗರವಾಗಿದ್ದರೂ, ಅದ್ಭುತ ಸಾರ್ವಜನಿಕ ಸಾರಿಗೆ ಹೊಂದಿದೆ.

ಪಂಚ ಮಹಾಸರೋವರಗಳಲ್ಲಿ ಒಂದಾದ ಮಿಚಿಗನ್ ಸರೋವರದ ದಂಡೆಯ ಈ ನಗರ, ವಾಸ್ತುಶಿಲ್ಪ ಮತ್ತು ಸೌಂದರ್ಯದ ಜೊತೆಗೆ ಸಾರ್ವಜನಿಕ ಹಿತಾಸಕ್ತಿಗೆ ಹೆಸರಾದ ನಗರ. ನಾಗರಿಕರನ್ನು ಓದಿನತ್ತ, ಕಲಿಕೆಯತ್ತ ನಿರಂತರವಾಗಿ ಆಕರ್ಷಿಸಲು ಬೆಂಬಲವಾಗಿರುವ ಗ್ರಂಥಾಲಯ ಪರಿಕಲ್ಪನೆಯು ಹೆರಾಲ್ಡ್ ವಾಷಿಂಗ್ಟನ್ ಕೇಂದ್ರೀಯ ಗ್ರಂಥಾಲಯದ ಜೊತೆ ನಗರದಾದ್ಯಂತ 81 ಸ್ಥಳಗಳಲ್ಲಿ ಪುಸ್ತಕದ ಪ್ರೀತಿಯನ್ನು ಹಂಚುತ್ತಿದೆ.

2024ರ ಇಡೀ ಗ್ರಂಥಾಲಯದ ಪುಸ್ತಕ ಪ್ರೇಮದ ವಹಿವಾಟಿನಲ್ಲಿ ಕೆಲವೊಂದು ವಿಶೇಷಗಳಿವೆ. ಗ್ರಂಥಾಲಯವು ತನ್ನೆಲ್ಲಾ ಪುಸ್ತಕ ಪ್ರೀತಿಯ ಕಾರ್ಯಕ್ರಮಗಳೇ ಮೊದಲಾದ ಒಟ್ಟಾರೆಯ ಗ್ರಂಥಾಲಯಗಳ ನಿರ್ವಹಣೆಗೆ ಮತ್ತು ಚಟುವಟಿಕೆಗಳಿಗೆ ಮಾಡಿದ ಖರ್ಚು ಸುಮಾರು 65 ಲಕ್ಷ ಡಾಲರ್‌ಗಳು. ಅಲ್ಲಿನ ನಾಗರಿಕ ಸಹಾಯವೂ ಅಷ್ಟೇ ವಿಶ್ವಾಸಾರ್ಹವಾಗಿದೆ. ಸುಮಾರು 23000ಕ್ಕೂ ಹೆಚ್ಚು ಸ್ಥಿತಿವಂತ ನಾಗರಿಕರು 2024ರಲ್ಲಿ ದೇಣಿಗೆ ನೀಡಿ ಪ್ರೋತ್ಸಾಹಿಸಿದ್ದಾರೆ. ನಗರದ ಸುಮಾರು 4.5 ಲಕ್ಷ ಜನರು ಗ್ರಂಥಾಲಯದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಲೈಬ್ರರಿ ಪ್ರತಿಷ್ಠಾನದ ಜಾಗತಿಕ ಸಂಪರ್ಕದಲ್ಲಿ ಸುಮಾರು 12 ಲಕ್ಷ ಜನರು ಪುಸ್ತಕ ಪ್ರೀತಿಯನ್ನು ಮೆರೆದಿದ್ದಾರೆ.

ಶಿಕಾಗೋದ ಗ್ರಂಥಾಲಯವು ತನ್ನ ದಾನಿಗಳು ಮತ್ತು ನಗರಾಡಳಿತದ ನೆರವಿನ ಮೂಲಕ ಸಾಂಸ್ಕೃತಿಕ ಮತ್ತು ಸೃಜನಶೀಲ ಕಾರ್ಯಕ್ರಮಗಳನ್ನು ಎಲ್ಲಾ 81 ನೆರೆಹೊರೆಯ ಗ್ರಂಥಾಲಯ ಶಾಖೆಗಳಲ್ಲಿ ತರುವ ಮೂಲಕ ವೈವಿಧ್ಯಮಯ ಧ್ವನಿಗಳು ಮತ್ತು ದೃಷ್ಟಿಕೋನಗಳಿಂದ ನಾಗರಿಕ ಬದುಕನ್ನು ಶ್ರೀಮಂತಗೊಳಿಸಲು ಬದ್ಧವಾಗಿದೆ. ಶಿಕಾಗೋದ ಸಾರ್ವಜನಿಕ ಗ್ರಂಥಾಲಯವು 2024ರಲ್ಲಿ ಅಲ್ಲಿರುವ ಯಾವುದೇ ಸಂಸ್ಥೆಗಳಿಗಿಂತ ಭಿನ್ನವಾದ 'ಅತ್ಯುತ್ತಮ ನಾಗರಿಕ ಸಂಸ್ಥೆ' ಎಂದು ಹೆಸರು ಗಳಿಸಿದೆ.

ಶಿಕಾಗೋ ನಗರದ ಸಾರಿಗೆ ವ್ಯವಸ್ಥೆ ಮತ್ತು ಆ ವಾಹನಗಳ ಚಾಲಕರ ಸೌಜನ್ಯಗಳನ್ನು ಸ್ವತಃ ಅನುಭವಿಸುತ್ತಲೇ ಅಲ್ಲಿ ಕನಿಷ್ಠ ನಾಲ್ಕೈದು ಬಾರಿ ಗ್ರಂಥಾಲಯದ ಮುಂದೆ ಅಡ್ಡಾಡಿದ್ದೇನೆ. ಒಂದು ದಿನ ಹೋಗಲೇಬೇಕೆಂದು ಒಳಹೊಕ್ಕ ಅಚ್ಚರಿಗೆ, ಅಲ್ಲಿನ ನೌಕರರ ಸಹಾನುಭೂತಿಗೆ ಬೆರಗಾಗಿ ನನ್ನ ಕುತೂಹಲಕ್ಕೆ ದಕ್ಕಿದ ವಿಚಾರಗಳನ್ನು ಇಲ್ಲಿ ಹಂಚಿಕೊಂಡಿದ್ದೇನೆ. 'ಓದು ವಿರಳವಾಗುತ್ತಿದೆ' ಎನ್ನುವ ಪ್ರಸ್ತುತ ಸಂದರ್ಭದಲ್ಲಿ ಗ್ರಂಥಾಲಯದ ನಿರ್ಮಿತಿ, ಕಾರ್ಯವೈಖರಿ ಇತ್ಯಾದಿಗಳ ಅಚ್ಚರಿಯನ್ನಷ್ಟೇ ನಿಮ್ಮ ಮುಂದಿಟ್ಟಿರುವೆ.

ಪ್ರತಿಕ್ರಿಯಿಸಿ: **feedback@sudha.co.in**